

# ಬೆಳ್ಳಿ ಬಾಲೆಯರ ಬೆಲ್ಲಿ ಡಾನ್ಸ್

‘ಬೆಲ್ಲಿ ಡಾನ್ಸ್’ ಎಂದಕೂಡಲೇ ಬಳಕುವ ಬಳ್ಳಿಯಂತಹ ಚೆಲುವೆಯರು ಹಾಗೂ ಅವರ ಬಳುಕಾಟ ಕಣ್ಮುಂದೆ ಬರುತ್ತವೆ. ಈ ಪಾಶ್ಚಾತ್ಯ ನೃತ್ಯಪ್ರಕಾರ, ದೇಶ–ಕಾಲಕ್ಕೆ ತಕ್ಕಂತೆ ಸಣ್ಣಪುಟ್ಟ ರೂಪಾಂತರ ಹೊಂದುತ್ತ ಅಸ್ತಿತ್ವ ಕಂಡುಕೊಂಡಿರುವುದು ವಿಶೇಷ.

■ ಧಾರಿಣಿ ಮಾಯಾ

ಬೆಲ್ಲಿ ಡಾನ್ಸ್ ಎಂಬುದು ಒಂದು ಅರೇಬಿಕ್ ನೃತ್ಯಶೈಲಿಯ, ಜಾನಪದ ಹಾಗೂ ಸಾಂಪ್ರದಾಯಿಕ ನೃತ್ಯ. ಆಯಾ ದೇಶಕ್ಕೆ ಅಥವಾ ಸ್ಥಳಕ್ಕೆ ಸೀಮಿತವಾಗುವಂತೆ ಈ ನೃತ್ಯ ತನ್ನದೇ ರೀತಿಯಲ್ಲಿ ವಿಕಸನಗೊಂಡು ರೂಪಾಂತರಗೊಂಡಿದೆ.

ಅರೇಬಿಕ್‌ನಲ್ಲಿ ಈ ನೃತ್ಯ ಶೈಲಿಯನ್ನು ‘ರಾಕ್ ಶಾರ್ಕಿ’ ಎಂದರೆ ಓರಿಯಂಟಲ್ ಅಥವ ಮಿಡಲ್ ಈಸ್ಟರ್ನ್ ಡಾನ್ಸ್ ಎಂತಲೂ ಕರೆಯುತ್ತಾರೆ. ಈ ಶೈಲಿಯಲ್ಲಿ ಎದೆ, ಸೊಂಟ ಹಾಗು ಹೊಟ್ಟೆಯ ಚಲನವಲನಗಳು ಮುಖ್ಯವಾಗಿರುತ್ತದೆ. ಈ ಬೆಲ್ಲಿ ನೃತ್ಯ, ಶರೀರದ ನಟ್ಟೊಡಲಿನ ಒಂದು ಅಭಿವ್ಯಕ್ತಿ ರೂಪದ ಸಂಕೀರ್ಣ ಚಲನವಲನಗಳನ್ನು ಒಳಗೊಂಡಿರುತ್ತದೆ. ಬೆಲ್ಲಿ ನೃತ್ಯದಲ್ಲಿ ಸೊಂಟವನ್ನು ವರ್ತುಲಾಕಾರದಲ್ಲಿ ಸುತ್ತಿಸುತ್ತ, ಹೊಟ್ಟೆಯ ಭಾಗಕ್ಕೆ ಹೆಚ್ಚಿನ ಮಹತ್ವವನ್ನು ಕೊಡುವುದರಿಂದ, ಈ ನೃತ್ಯಾಭ್ಯಾಸವನ್ನು ಮಾಡುತ್ತಾ ಬಂದ ಹೆಣ್ಣುಮಕ್ಕಳಲ್ಲಿ ಹೆರಿಗೆಯ ಸಮಯದಲ್ಲಿ ಅವರ ಕಿಬ್ಬೊಟ್ಟೆಯ ಸ್ನಾಯುಗಳ ಹಿಗ್ಗುವಿಕೆಯಿಂದಾಗಿ, ಮಗುವಿನ ಹುಟ್ಟು ಸುಸೂತ್ರವಾಗಿ ಆಗುತ್ತದೆಂಬ ನಂಬಿಕೆ ಅರಬ್ ಜನರಲ್ಲಿದೆ.

ಬೆಲ್ಲಿ ನೃತ್ಯವಿಧಾನದಲ್ಲಿ ಎದೆಯ ಹಾಗೂ ಸೊಂಟದ ಪ್ರತ್ಯೇಕತೆಯ ಚಲನವಲಗಳು ನೋಡುಗರಲ್ಲಿ ಬೆರಗು ಮೂಡಿಸುತ್ತದೆ. ನೋಡಲು ಈ ನೃತ್ಯ ಬಹಳ ಸರಳವೆನಿಸಿದರೂ, ಈ ಶೈಲಿಯನ್ನು ಅಳವಡಿಸಿಕೊಳ್ಳಲು 2–3